೫) ಪರಿಹಾರ ರೂಪದಲ್ಲಿ ಹಣವನ್ನು ಈ ಕೆಳಗೆ ತೋರಿಸಿದಂತೆ ಕೊಡಲಾಗಿದೆ.

| | | ಉಳಿಕೆ ಹಣ |
|---|---|---|
| ಬೆಳಗಾವಿ ಜಿಲ್ಲೆ | ರೂ. ೩೫,೪೦೦ | — |
| ಬಿಜಾಪುರ ,, | ಪರಿಹಾರ ಕೊಟ್ಟಿಲ್ಲ | — |
| ಬಳ್ಳಾರಿ ,, | ರೂ. ೧ ಲಕ್ಷ | — |
| ಧಾರವಾಡ ,, | ರೂ. ೮೩,೯೦೦ | ೧೬,೧೦೦ |
| ಚಿತ್ರದುರ್ಗ ,, | ಸರ್ಕಾರಕ್ಕೆ ಹಣ ಹಿಂತಿರುಗಿಸಿದೆ. | — |
| ಬಿದರ್ ,, | ರೂ. ೧ ಲಕ್ಷ | — |

ಈ) ಬೆಳಗಾವಿ ಜಿಲ್ಲೆ ಉದ್ಭವಿಸುವುದಿಲ್ಲ.
ಬಿಜಾಪುರ ,, ಕಡತವು ಸಿಕ್ಕದಿದ್ದರಿಂದ
ಬಳ್ಳಾರಿ ,, ಉದ್ಭವಿಸುವುದಿಲ್ಲ
ಧಾರವಾಡ ,, ಪರಿಹಾರ ಅರ್ಹರಾದವರಿಗೆ ಕೊಟ್ಟಿದೆ.
ಚಿತ್ರದುರ್ಗ ,, ಕುರಿಗಳು ಸತ್ತಿರುವುದಿಲ್ಲ. ಹಣ ಹಿಂತಿರುಗಿಸಿದೆ.
ಬಿದರ್ ,, ಉದ್ಭವಿಸುವುದಿಲ್ಲ

## ತುಮಕೂರು ಜಿಲ್ಲೆಯ ಕಳ್ಳಂಬೆಳ್ಳ ಚುನಾವಣಾ ಕ್ಷೇತ್ರದಲ್ಲಿ ಅವಶ್ಯಕವಿರುವ ಉಪಾಧ್ಯಾಯರುಗಳ ಸಂಖ್ಯೆ

೫. ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

ಅ) ತುಮಕೂರು ಜಿಲ್ಲೆಯ ಕಳ್ಳಂಬೆಳ್ಳ ಕ್ಷೇತ್ರಕ್ಕೆ (೧) ಪ್ರಾಥಮಿಕ ಶಿಕ್ಷಣ (೨) ಪ್ರೌಢ ಶಿಕ್ಷಣ (೩) ಕಾಲೇಜು ಶಿಕ್ಷಣ ಮತ್ತು (೪) ದೈಹಿಕ ಶಿಕ್ಷಣಕ್ಕೆ ಅವಶ್ಯಕವಿರುವ ಶಿಕ್ಷಕರುಗಳ ಸಂಖ್ಯೆ ಎಷ್ಟು ?

(ಆ) ಈ ಶಿಕ್ಷಕರನ್ನು ನೇಮಿಸಲು ಸರ್ಕಾರವು ತೆಗೆದುಕೊಂಡ ಕ್ರಮ ಏನು ?

ಶ್ರೀ. ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) (೧) ಪ್ರಾಥಮಿಕ ಶಿಕ್ಷಣ —೨೬
(೨) ಪ್ರೌಢ ಶಿಕ್ಷಣ — ೬
(೩) ಕಾಲೇಜು ಶಿಕ್ಷಣ (ಕಿರಿಯ ಕಾಲೇಜು) — ೧
(೪) ದೈಹಿಕ ಶಿಕ್ಷಣ — ೧

ಆ) ಜಿಲ್ಲಾ ನೇಮಕಾತಿ ಸಮಿತಿಗಳನ್ನು ಇದೀಗ ರಚಿಸಲಾಗಿ, ಪ್ರಾಥಮಿಕ ಶಿಕ್ಷಣ ಖಾಲಿ ಇರುವ ಹುದ್ದೆಗೆ ಶೀಘ್ರದಲ್ಲೇಯೇ ನೇಮಕಾತಿ ಮಾಡುವ ನಿರೀಕ್ಷೆ ಇದೆ. ಉಳಿದ ಹುದ್ದೆಗಳಿಗೂ ಶೀಘ್ರವಾಗಿ ನೇಮಕಾತಿ ನೀಡಲಾಗುವುದು.

## ರಾಜ್ಯದಲ್ಲಿರುವ ಪಾಲಿಟೆಕ್ನಿಕ್ ಸಂಸ್ಥೆಗಳ ಬಗ್ಗೆ

೬೧. ಶ್ರೀ ವಿ. ಎಸ್. ಆಚಾರ್ಯ (ಉಡುಪಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ರಾಜ್ಯದಲ್ಲಿರುವ ಒಟ್ಟು ಪಾಲಿಟೆಕ್ನಿಕ್ ಸಂಸ್ಥೆಗಳ ಸಂಖ್ಯೆ ಎಷ್ಟು ;
ಆ) ಇವುಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ಎಷ್ಟು ;
ಇ) ಈ ಸಂಸ್ಥೆಗಳಲ್ಲಿ ಸಧ್ಯ ಇರುವ ಪ್ರವೇಶಾವಕಾಶ ಎಷ್ಟು ;
ಈ) ಇಂತಹ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲು ಸರ್ಕಾರದವರು ಬಯಸಿಹ್ಯಾರೆಯೇ
ಉ) ಈ ವರ್ಷ ಜಿಲ್ಲಾವಾರು ಎಷ್ಟೆಷ್ಟು ಸಂಸ್ಥೆಗಳಿಗೆ ಅನುಮತಿ ನೀಡಲಾಗಿದೆ ?